ಕರ್ನಾಟಕ ಸರ್ಕಾರ
Government of Karnataka

# ಸರ್ಕಾರಿ ದಂತ ಕಾಲೇಜು & ಸಂಶೋಧನಾ ಸಂಸ್ಥೆ, ಬೆಂಗಳೂರು

# Government Dental College & Research Institute, Bangalore

(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ) (Govt. Autonomous Institute)

ವಿಕ್ಟೋರಿಯಾ ಆಸ್ಪತ್ರೆ ಆವರಣ, ಕೋಟೆ, ಬೆಂಗಳೂರು -2. Victoria Hospital Campus, Fort, B'lore-2

www.karnataka.gov.in/gdcrib Email- gdcribangalore@gmail.com Phone/Fax:080-26705053/26703176

ಸಂಖ್ಯೆ:ಸದಂಕಾಸಂಸಂ/ಆಡಳಿತ/17/2018-19

ನಿರ್ದೇಶಕರು ಮತ್ತು ಡೀನ್ ರವರ ಕಾರ್ಯಾಲಯ,
ದಿನಾಂಕ:11.02.2019

## ಟೆಂಡರ್ ಅಧಿಸೂಚನೆ

ವಿಷಯ:- ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಲ್ಲಿರುವ ನಿರುಪಯುಕ್ತ ಮಿನಿ ಒಮ್ನಿ ಬಸ್‌ನ್ನು ಟೆಂಡರ್ ಕಮ್ ಹರಾಜು ಮೂಲಕ ವಿಲೇವಾರಿ ಮಾಡುವ ಕುರಿತು

-----**-----

ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಈ ಸಂಸ್ಥೆಯಲ್ಲಿರುವ ಅನುಪಯುಕ್ತ ಮಿನಿ ಒಮ್ನಿ ಬಸ್ ಸಂಖ್ಯೆ ಸಿಎಜಿ 1275 ಸ್ವರಾಜ್ ಮಜ್ದವನ್ನು ಟೆಂಡರ್ ಕಮ್ ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲು ಟೆಂಡರ್ ಅಧಿಸೂಚನೆ ಹೊರಡಿಸಲಾಗಿದೆ.

ಮೇಲ್ಕಂಡ ಮಿನಿ ಒಮ್ನಿ ಬಸ್‌ನ್ನು ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಸಂಸ್ಥೆಯ ಆವರಣದಲ್ಲಿ ಇಡಲಾಗಿದೆ. ಸದರಿ ಒಮ್ನಿ ಬಸ್‌ನ್ನು ಆಸಕ್ತ ಬಿಡ್‌ದಾರರು ಹಾಗೂ ಸಾರ್ವಜನಿಕರು ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಚಿಸುವರು ದಿನಾಂಕ:12.02.2019 ರಿಂದ 11.03.2019ರವರೆಗೆ ಬೆಳಿಗ್ಗೆ 11.00 ಗಂಟೆಗೆ ಪರಿಶೀಲಿಸಬಹುದು. ಆಸಕ್ತರು ಬಿಡ್ಡಿನ ನಿಗದಿತ ಅರ್ಜಿ ನಮೂನೆ, ನಿಬಂಧನೆ ಮತ್ತು ಷರತ್ತುಗಳ ವಿವರಗಳನ್ನು ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಅಥವಾ ಸಂಸ್ಥೆಯ https://www.karnataka.gov.in/gdcrib/pages/home.aspx ವೆಬ್‌ಸೈಟ್‌ನಿಂದ ಪಡೆಯಬಹುದು. ಆಸಕ್ತರು ತಮ್ಮ ಬಿಡ್‌ಗಳನ್ನು ದಿನಾಂಕ:11.03.2019 ಸಾಯಂಕಾಲ 3.00 ಗಂಟೆಯೊಳಗೆ ಅಂಚೆ ಮೂಲಕ ಅಥವಾ ಖುದ್ದಾಗಿ ಮುಚ್ಚಿದ ಲಕೋಟೆಯಲ್ಲಿ ಈ ಸಂಸ್ಥೆಯ ಡೀನ್ ಕಮ್ ನಿರ್ದೇಶಕರಿಗೆ ಸಲ್ಲಿಸಬೇಕು.

ಡೀನ್ ಮತ್ತು ನಿರ್ದೇಶಕರು,
ಸರ್ಕಾರಿ ದಂತ ಕಾಲೇಜು ಮತ್ತು
ಸಂಶೋಧನಾ ಸಂಸ್ಥೆ, ಬೆಂಗಳೂರು.

**ಪ್ರತಿಯನ್ನು ತಮ್ಮ ಸಂಸ್ಥೆಯ ಸೂಚನಾ ಫಲಕದಲ್ಲಿ ಪ್ರಚಾರಕ್ಕಾಗಿ ಪ್ರಕಟಿಸಲು ಕೋರಲಾಗಿದೆ.**

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈದ್ಯಕೀಯ ಶಿಕ್ಷಣ) ಬಹುಮಹಡಿಗಳ ಕಟ್ಟಡ, ಬೆಂಗಳೂರು.
2) ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದರಾವ್ ವೃತ್ತ, ಬೆಂಗಳೂರು.
3) ನಿರ್ದೇಶಕರು, ಕಾರ್ಮಿಕ ವಿಮಾ ಸೇವೆಗಳು, ಬೆಂಗಳೂರು.
4) ವೈದ್ಯಕೀಯ ಅಧೀಕ್ಷಕರು: ವಿಕ್ಟೋರಿಯಾ ಆಸ್ಪತ್ರೆ: ವಾಣಿ ವಿಲಾಸ್ ಆಸ್ಪತ್ರೆ: ಬೌರಿಂಗ್ ಆಸ್ಪತ್ರೆ: ಕೆ.ಸಿ.ಜನರಲ್ ಆಸ್ಪತ್ರೆ: ಮಿಂಟೋ ಆಸ್ಪತ್ರೆ, ಬೆಂಗಳೂರು.

5) ಡೀನ್ ಕಂ ನಿರ್ದೇಶಕರು, ಬೆಂಗಳೂರು ವೈದ್ಯಕೀಯ ವಿದ್ಯಾಲಯ, ಬೆಂಗಳೂರು.
6) ನಿರ್ದೇಶಕರು, ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆ, ಬೆಂಗಳೂರು.
7) ನಿರ್ದೇಶಕರು, ನಿಮ್ಹಾನ್ಸ್ ಆಸ್ಪತ್ರೆ, ಬೆಂಗಳೂರು.
8) ನಿರ್ದೇಶಕರು, ಸಂಜಯಗಾಂಧಿ ಸಂಶೋಧನಾ ಮತ್ತು ಅಪಘಾತ ಆಸ್ಪತ್ರೆ, ಬೆಂಗಳೂರು.
9) ನಿರ್ದೇಶಕರು, ಇಂದಿರಾಗಾಂಧಿ ಮಕ್ಕಳ ಆಸ್ಪತ್ರೆ, ಬೆಂಗಳೂರು.
10) ನಿರ್ದೇಶಕರು, ಶ್ರೀ ಜಯದೇವ ಹೃದ್ರೋಗ ಸಂಸ್ಥೆ, ಬೆಂಗಳೂರು.
11) ನಿರ್ದೇಶಕರು, ಎಸ್.ಡಿ.ಎಸ್ ಕ್ಷಯ ಮತ್ತು ರಾಜೀವ್ ಗಾಂಧಿ ಎದೆ ರೋಗಗಳ ಸಂಸ್ಥೆ, ಬೆಂಗಳೂರು.
12) ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಆನಂದರಾವ್ ವೃತ್ತ, ಬೆಂಗಳೂರು.
13) ನಿರ್ದೇಶಕರು, ಕರ್ನಾಟಕ ಮಧುಮೇಹ ಸಂಸ್ಥೆ, ಎಸ್.ಜೆಐಸಿಆರ್ ಆವರಣ, ಬೆಂಗಳೂರು.
14) ಸಂಸ್ಥೆಯ ಸೂಚನಾ ಫಲಕ
15) ಕಛೇರಿ ಪ್ರತಿ.

ಡೀನ್ ಮತ್ತು ನಿರ್ದೇಶಕರು,
ಸರ್ಕಾರಿ ದಂತ ಕಾಲೇಜು ಮತ್ತು
ಸಂಶೋಧನಾ ಸಂಸ್ಥೆ, ಬೆಂಗಳೂರು.

# ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು

(ಕರ್ನಾಟಕ ಸರ್ಕಾರದ ಅಧೀನದ ಸ್ವಾಯತ್ತ ಸಂಸ್ಥೆ)

## ಅನುಪಯುಕ್ತ ಮಿನಿ ಒಮ್ನಿ ಬಸ್ ಸಂಖ್ಯೆ ಸಿಎಜಿ 1275 ಸ್ವರಾಜ್ ಮಜ್ದ್‌ವನ್ನು ವಿಲೇವಾರಿಗಾಗಿ ಅರ್ಜಿ ನಮೂನೆ

ಇವರಿಂದ

ಇವರಿಗೆ

ಡೀನ್ ಕಮ್ ನಿರ್ದೇಶಕರು,
ಸರ್ಕಾರಿ ದಂತ ಕಾಲೇಜು ಮತ್ತು
ಸಂಶೋಧನಾ ಸಂಸ್ಥೆ, ಬೆಂಗಳೂರು.

ಮಾನ್ಯರೇ,

ವಿಷಯ:- ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಲ್ಲಿರುವ ನಿರುಪಯುಕ್ತ ಮಿನಿ ಒಮ್ನಿ ಬಸ್‌ನ್ನು ಟೆಂಡರ್ ಕಮ್ ಹರಾಜು ಮೂಲಕ ವಿಲೇವಾರಿ ಮಾಡುವ ಕುರಿತು

-----**-----

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಸಂಸ್ಥೆಯ ಅಧಿಸೂಚನೆ ಸಂಖ್ಯೆ:ಸದಂಕಾಸಂಸಂ/ಆಡಳಿತ/17/2018-19 ದಿನಾಂಕ:11.02.2019ರ ಪ್ರಕಾರ ನಾನು/ನಾವುಗಳು ಅನುಪಯುಕ್ತ ಮಿನಿ ಒಮ್ನಿ ಬಸ್ ಸಂಖ್ಯೆ ಸಿಎಜಿ 1275 ಸ್ವರಾಜ್ ಮಜ್ದ್‌ವನ್ನು ನಿರುಪಯುಕ್ತಗೊಳಿಸುವ ಸಂಬಂಧ ಟೆಂಡರ್ ಕಮ್ ಹರಾಜು ನಿಬಂಧನೆ ಷರತ್ತುಗಳಿಗೆ ಒಪ್ಪಿ ದರ ನಮೂದಿಸಿ ಸಲ್ಲಿಸುತ್ತಿದ್ದೇನೆ.

ಬಿಡ್ಡುದಾರರು ಸಹಿ ಮತ್ತು ಸಂಸ್ಥೆಯ ಮೊಹರು

# ಟೆಂಡರ್ ನಿಬಂಧನೆ ಮತ್ತು ಷರತ್ತುಗಳು

1) ಒಮ್ನಿ ಬಸ್ ಸಂಖ್ಯೆ ಸಿಐಜಿ 1275 ಸ್ವರಾಜ್ ಮಜ್ದ್‌ವನ್ನು ವಿಲೇವಾರಿಯ ಟೆಂಡರ್ ಕಂ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವ ಆಸಕ್ತ ಬಿಡ್‌ದಾರರು ನಿಗದಿತ ಅರ್ಜಿ ನಮೂನೆಯನ್ನು ಹಾಗೂ ಟೆಂಡರ್ ನಿಬಂಧನೆ ಮತ್ತು ಷರತ್ತುಗಳನ್ನು ಸಂಸ್ಥೆಯ https://www.karnataka.gov.in/gdcrib/pages/home.aspx ವೆಬ್‌ಸೈಟ್‌ನಲ್ಲಿ/ಕಛೇರಿಯಲ್ಲಿ ಪಡೆದುಕೊಳ್ಳತಕ್ಕದ್ದು.

2) ಆಸಕ್ತಿಯುಳ್ಳ ಬಿಡ್‌ದಾರರು ಅನುಪಯುಕ್ತ ಒಮ್ನಿ ಬಸ್‌ನ್ನು ಖರೀದಿಸಲು ಅರ್ಜಿ ಶುಲ್ಕವಾಗಿ ಡಿಡಿ ರೂ.300/-ಗಳನ್ನು ಡೀನ್ ಕಮ್ ನಿರ್ದೇಶಕರು, ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇವರ ಹೆಸರಿನಲ್ಲಿ ಪಡೆದು ಟೆಂಡರ್ ನಮೂನೆಯನ್ನು ಭರ್ತಿ ಮಾಡಿ, ಸೀಲ್ ಮಾಡಿ ದಿನಾಂಕ:11.03.2019 ರಂದು ಸಾಯಂಕಾಲ 3.00 ಗಂಟೆಯೊಳಗೆ ಅರ್ಜಿ ಶುಲ್ಕದೊಂದಿಗೆ ನಿರ್ದೇಶಕರು, ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಸಲ್ಲಿಸತಕ್ಕದ್ದು. ಅರ್ಜಿ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.

3) ಟೆಂಡರ್ ಅರ್ಜಿ ಜೊತೆ ಭದ್ರತಾ ಠೇವಣಿಯಾಗಿ ರೂ.10,000/-ಗಳ ಡಿ.ಡಿಯನ್ನು ಡೀನ್ ಕಂ ನಿರ್ದೇಶಕರ ಹೆಸರಿನಲ್ಲಿ ಪಡೆದು ಸಲ್ಲಿಸತಕ್ಕದ್ದು.

5) ಟೆಂಡರ್‌ನಲ್ಲಿ ಯಶಸ್ವಿಯಾಗದವರಿಗೆ ಭದ್ರತಾ ಠೇವಣಿ ಹಣ ಕೂಡಲೇ ವಾಪಸ್ ಕೊಡಲಾಗುವುದು.

6) ಟೆಂಡರ್ ಲಕೋಟೆಯನ್ನು ತೆರೆಯುವ ದಿನಾಂಕ:11.03.2019ರ ಸಾಯಂಕಾಲ 3.30 ಗಂಟೆಗೆ ಡೀನ್ ಕಮ್ ನಿರ್ದೇಶಕರ ಕೊಠಡಿ, ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು.

7) ಡೀನ್ ಕಂ ನಿರ್ದೇಶಕರು, ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ರವರ ಮೇಲು ಉಸ್ತುವಾರಿಯಲ್ಲಿ ಅಥವಾ ಅವರಿಂದ ನೇಮಿಸಲ್ಪಟ್ಟ ಅಧಿಕಾರಿಗಳ ಉಸ್ತುವಾರಿಯಲ್ಲಿ ಅನುಪಯುಕ್ತ ಒಮ್ನಿ ಬಸ್‌ನ್ನು ವಿಲೇವಾರಿಯ ಕೆಲಸವನ್ನು ನಡೆಸುವರು. ಟೆಂಡರ್‌ನಲ್ಲಿ ಭಾಗವಹಿಸುವ ಬಿಡ್ಡುದಾರರು ಅನುಪಯುಕ್ತ ಒಮ್ನಿ ಬಸ್‌ನ್ನು ತಮ್ಮ ಬೆಲೆಯ ಬಿಡ್ಡನ್ನು ಅರ್ಜಿ ನಮೂನೆಯಲ್ಲಿಯೇ ಭರ್ತಿ ಮಾಡಿ ಸಲ್ಲಿಸತಕ್ಕದ್ದು.

8) ಯಶಸ್ವಿಯಾದ ಬಿಡ್ಡುದಾರರು ಒಟ್ಟು ಮೊತ್ತದಲ್ಲಿ ಶೇಕಡ 50 ರಷ್ಟು ಮೊತ್ತವನ್ನು ಕೂಡಲೇ ಡೀನ್ ಕಂ ನಿರ್ದೇಶಕರು, ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ರವರ ಕಛೇರಿಯ ನಗದು ವಿಭಾಗದಲ್ಲಿ ಪಾವತಿ ಮಾಡತಕ್ಕದ್ದು, ವಿಲೇವಾರಿ ಆದೇಶ ಪತ್ರ ಬಿಡ್ಡುದಾರರಿಗೆ ತಲುಪಿದ ಒಂದು ದಿನಗಳೊಳಗೆ ಬಾಕಿ ಶೇಕಡ 50ರಷ್ಟು ಮೊತ್ತ ಮತ್ತು ತೆರಿಗೆ ಹಣವನ್ನು ಪಾವತಿ ಮಾಡತಕ್ಕದ್ದು ನಂತರ ಅನುಪಯುಕ್ತ ವಸ್ತುಗಳನ್ನು ತೆಗೆದುಕೊಳ್ಳದಿದ್ದಲ್ಲಿ ಬಿಡ್ಡುದಾರರ ಬಿಡ್ಡನ್ನು ರದ್ದುಗೊಳಿಸಲಾಗುವುದು ಹಾಗೂ ಅನುಪಯುಕ್ತ ವಸ್ತುಗಳನ್ನು ಮಾರಾಟ ಮಾಡುವುದಕ್ಕೆ ಪ್ರತ್ಯೇಕವಾಗಿ ಕ್ರಮವನ್ನು ತೆಗೆದುಕೊಳ್ಳಲಾಗುವುದು.

9) ಎಲ್ಲಾ ನಗದು ಪಾವತಿಗಳನ್ನು ಡೀನ್ ಕಂ ನಿರ್ದೇಶಕರು, ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ರವರ ನಗದು ವಿಭಾಗದಲ್ಲಿ ಮಾತ್ರ ಪಾವತಿ ಮಾಡತಕ್ಕದ್ದು.

10) ಬಿಡ್ಡುದಾರರು ಪಾವತಿ ಮಾಡಿರುವ ಠೇವಣಿ ಹಣವನ್ನು ಅನುಪಯುಕ್ತ ವಸ್ತುಗಳ ಬಾಕಿ ಇರುವ ಶೇಕಡ 50 ರಷ್ಟು ಮೊತ್ತಕ್ಕೆ ಹೊಂದಾಣಿಕೆ ಮಾಡಲಾಗುವುದಿಲ್ಲ. ಬಿಡ್ಡುದರರು ಎಲ್ಲಾ ನಿಬಂಧನೆ ಮತ್ತು ಷರತ್ತುಗಳನ್ನು ಪೂರೈಸಿ ಅನುಪಯುಕ್ತ ವಸ್ತುಗಳನ್ನು ತಮ್ಮ ವಶಕ್ಕೆ ಪಡೆದ ನಂತರ ಠೇವಣಿ ಮೊತ್ತ ರೂ.10,000/-ಗಳನ್ನು ಲೆಕ್ಕ ಶಾಖೆಯಿಂದ ವಾಪಸ್ ಪಡೆಯಬಹುದಾಗಿದೆ.